International Journal of Kannada Research
www.kannadajournal.com

ISSN: 2454–5813
IJKR 2023; 9(3): 05-07
© 2023 IJKR
www.kannadajournal.com
Received: 08-05-2023
Accepted: 11-06-2023

**ಡಾ.ಜೆ.ಕರಿಯಪ್ಪ ಮಾಳಿಗೆ**
ಕನ್ನಡ ಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು,
ಚಿತ್ರದುರ್ಗ, ಕರ್ನಾಟಕ, ಭಾರತ

**Corresponding Author:**
**ಡಾ.ಜೆ.ಕರಿಯಪ್ಪ ಮಾಳಿಗೆ**
ಕನ್ನಡ ಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು,
ಚಿತ್ರದುರ್ಗ, ಕರ್ನಾಟಕ, ಭಾರತ

# ಕಾಯಕ ನಿಷ್ಠೆ ಮತ್ತು ದಾಸೋಹ ಸೇವೆಯ ಮೋಳಿಗೆ ಮಾರಯ್ಯ

**ಡಾ.ಜೆ.ಕರಿಯಪ್ಪ ಮಾಳಿಗೆ**

**DOI:** https://doi.org/10.22271/24545813.2023.v9.i3a.840

**ಪೀಠಿಕೆ**

ಲಿಂಗದ ಒಲುಮೆ ಇಲ್ಲದಲೆ ಎನ್ನುವ ಸರ್ವಜ್ಞನ ಈ ಮಾತು ಮೋಳಿಗೆ ಮಾರಯ್ಯನ ಬದುಕು ಮತ್ತು ವ್ಯಕ್ತಿತ್ವಕ್ಕೆ ಅನ್ವಯಿಸುವುದರಿಂದ ಇಲ್ಲಿ ಉಲ್ಲೇಖಿಸಿದೆ. ನಮಗೆಲ್ಲಾ ಗೊತ್ತಿರೋ ಹಾಗೆ ವ್ಯಕ್ತಿಯ ಬದುಕು ಮತ್ತು ಸಮಾಜದ ಸಂಬಂಧವನ್ನು ಕುರಿತಂತೆ 12ನೇ ಶತಮಾನದ ವಚನಕಾರರು ನಡೆಸಿರುವ ಚಿಂತನೆ ನಿಜವಾಗಿ ಅಭೂತಪೂರ್ವವಾದುದು.

ಸ್ಥಳೀಯ ಭಾಷೆ ಸಂಸ್ಕೃತಿ, ಚಿಂತನೆಗಳು ಅವಸಾನದ ಅಪಾಯ ಮತ್ತು ಆತಂಕವನ್ನು ಎದುರಿಸುತ್ತಿರುವ ಈ ಹೊತ್ತಿನಲ್ಲಿ ವಚನಕಾರರ ಬದುಕು ಮತ್ತು ಬರಹದೊಂದಿಗೆ ಹೊಸ ಸಂವಾದವನ್ನು ಕಲ್ಪಿಸಿಕೊಳ್ಳುವ ಅಗತ್ಯ ಮತ್ತು ಅನಿವಾರ್ಯತೆ ಇದೆ. ನಮ್ಮ ನಡಾವಳಿಗೆ ನಮ್ಮ ಪುರಾತನರ ನುಡಿಯೆ ಇಷ್ಟವಯ್ಯ ಎನ್ನುವ ಮಾತು ಈ ಹೊತ್ತಿನ ಬದುಕಿನ ಅನೇಕ ತುಡಿತಗಳಿಗೆ ಪರಿಹಾರವಾಗಿಯೂ ಕಾಣುತ್ತದೆ.

ವಚನಕಾರರು ಜಾತಿ ಉಪಜಾತಿಗಳಲ್ಲಿ ಹರಿದು ಹಂಚಿ ಹೋಗಿದ್ದ ಸಂಕಷ್ಟದ ಜೀವನ ಸಾಗಿಸುತ್ತಿದ್ದ, ಹಿಂಸಾಚರಣೆಗಳಿಂದ ನೊಂದಿದ್ದ ಹಲವಾರು ಕಾಯಕಜೀವಿಗಳನ್ನು ಒಂದಾಗುವಂತೆ ಮಾಡಿದರು. ಅವರನ್ನು ಮನುಷ್ಯರನ್ನಾಗಿಸಿದರು. ನುಡಿಗಿಂತ ನಡೆಗೆ ಹೆಚ್ಚು ಮಹತ್ವ ನೀಡಿದವರು. ಹಾಗಾಗಿ ನಡೆ ಎಂಬುದು ಅವರಿಗೆ ನುಡಿಗಿಂತ ಮೊದಲು. ವ್ಯಕ್ತಿಯನ್ನು ಜಾತಿಯಿಂದ ಪ್ರೀತಿಸದೆ ಕಾಯಕದಿಂದ ಪ್ರೀತಿಸಬೇಕೆಂದು ಸಮಾಜಕ್ಕೆ ತಿಳಿಯಪಡಿಸಿದರು. ಅವರಿಗೆ ಕಾಯಕವಷ್ಟೆ ಮುಖ್ಯ. ಹಾಗೆಯೇ ಗುರು–ಲಿಂಗ–ಜಂಗಮಕ್ಕೂ ಕಾಯಕವೇ ಅಂತಿಮ.

ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುರುಹು ಹರಿವುದು
ಜಂಗಮವಾದರೂಕಾಯಕದಿಂದಲೇ ತನ್ನ ಪಾಶ ಹರಿವುದು.

ಇವರ ದೃಷ್ಟಿಯಲ್ಲಿ ಕಾಯಕ ಮನುಷ್ಯ ಮತ್ತು ಸಮಾಜದ ನಂಟು ಬೆಸೆಯುವಂತದ್ದು. ಹಾಗಾಗಿ ಅದರ ಬಗ್ಗೆ ಅನನ್ಯ ಭಕ್ತಿ ಮತ್ತು ಗೌರವ. ಕಾಯಕವೇ ಕೈಲಾಸವಾದ ಕಾರಣ, ಅದಕ್ಕೆ ಪೂಜ್ಯ ನೆಲೆ ಪ್ರಾಪ್ತಿಸಿದ್ದಾರೆ. ಕನಿಷ್ಠವೆಂದು ಮರೆಯಾಗಿದ್ದ ಅನೇಕ ಕಸುಬುಗಳು ಇವರಿಂದ ಸಮಾಜದ ಮುಖ್ಯವಾಹಿನಿಗೆ ಬಂದವು. ಇಂಥ ಕಾಯಕದಲ್ಲಿ ಪುರುಷ ಮತ್ತು ಮಹಿಳೆಯರಲ್ಲದೆ ಅನೇಕ ಸತಿ ಪತಿಗಳು ತಮ್ಮ ಸಂಕಲ್ಪ ಸಾಧನೆಗೊಂದು ಬಲವೆಂಬಂತೆ ಕಾಯಕದಲ್ಲಿ ಒಂದಾದರು.

ಸತಿ ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ
ಸತಿ ಪತಿಗಳೊಂದಾಗದವರ ಭಕ್ತಿ
ಅಮೃತದೊಳು ವಿಷ ಬೆರಸಿದಂತೆ ಕಾಣಾ ರಾಮನಾಥ

ದಾಸಿಮಯ್ಯನ ಈ ಮಾತು ಎಷ್ಟೋ ದಂಪತಿಗಳಿಗೆ ಆದರ್ಶ ಮತ್ತು ಮಾದರಿ. ಬಸವಣ್ಣ ನೀಲಾಂಬಿಕೆ, ಗಂಗಾಬಿಕೆ, ದಾಸಿಮಯ್ಯ – ದುಗ್ಗಲೆ, ಆಯ್ದಕ್ಕಿ ಮಾರಯ್ಯ – ಲಿಂಗಮ್ಮ, ಹಡಪದ ಹಪ್ಪಣ್ಣ – ಲಿಂಗಮ್ಮ, ಉರಿಲಿಂಗ ಪೆದ್ದಿ – ಕಾಳವ್ವ, ಗಜೇಶ ಮಸಣಯ್ಯ – ಸತಿ ಕಾಳವ್ವೆ, ಮೋಳಿಗೆ ಮಾರಯ್ಯ

ಮಹಾದೇವಮ್ಮ, ಇಂತಹ ಅನೇಕ ಶರಣ ದಂಪತಿಗಳು ತಮ್ಮ ಸಾಂಸಾರಿಕ ಬದುಕಿನಲ್ಲಿ ಸಾಮರಸ್ಯತೆ ಅವರ ಭಕ್ತಿ ಸಾಧನೆಗೆ ಕಾಯಕವೇ ಶ್ರೇಣಿಯಾಗಿದೆ. ಸಂಸಾರವಂದಿಗರಾಗಿ ಶಿವಭಕ್ತಿಯ ಮೌಲ್ಯಗಳನ್ನು ಅಂದು ಜನತೆಗೆ ಪ್ರತ್ಯಕ್ಷವಾಗಿ ತಮ್ಮ ನಡೆ ನುಡಿಗಳಿಂದ ತೋರಿಸಿದ ಮಾದರಿಯ ದಂಪತಿಗಳಾಗಿದ್ದಾರೆ. ಸಿರಿವಂತಿಕೆಯ ಬದುಕಿಗಿಂತ ಬಡತನದ ಸರಳ ನಿಗರ್ವಿ ಜೀವನವೇ ಆಧ್ಯಾತ್ಮಕ್ಕೆ ಮುಖ್ಯ ಸಾಧನವೆಂದು ನಂಬಿದ ಹಲವಾರು ದಂಪತಿಗಳು ಸಾಕ್ಷೀಕರಿಸಿದರು.

ಬಸವಾದಿ ಶರಣರು ಜನತೆಯ ಮುಂದಿರಿಸಿದ ನವ ಸಮಾಜದ ತತ್ವಗಳು ಬದುಕಿಗೆ ತುಂಬಾ ಹತ್ತಿರವಾಗಿದ್ದು, ಆಚರಣೆ ಮತ್ತು ಅನುಸರಣೆಗೆ ಯೋಗ್ಯವಾಗಿದ್ದವು. ಭಕ್ತಿ, ಕಾಯಕ, ಆಚಾರ ವಿಚಾರ, ದಾಸೋಹ, ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ, ನಡೆನುಡಿ, ಈ ತತ್ವಗಳಿಗೆ ಆಕರ್ಷಿತರಾಗಿ ಅನೇಕ ಶ್ರಮಜೀವಿಗಳು ನಿಷ್ಠರಾಗಿಯೆ ಈ ಚಳುವಳಿಯಲ್ಲಿ ಒಂದಾದರು. ಈ ಸಾಮಾಜಿಕ ಚಳುವಳಿಯ ಕೀರ್ತಿ, ಪ್ರಭಾವ, ಪ್ರಚಾರ ದೇಶ, ಭಾಷೆ ಮತ್ತು ಕಾಲಗಳನ್ನು ಮೀರಿ ಹರಡಿತು. ಚಳುವಳಿಯ ತತ್ವಗಳಿಗೆ ಆಕರ್ಷಿತರಾಗಿ ನಾಡಿನ ಮೂಲೆಮೂಲೆಗಳಿಂದ ಕಲ್ಯಾಣಕ್ಕೆ ಆಗಮಿಸಿದರು. ಆ ಕಾಲದ ಸವಾಲಕ್ಷ (ಕಾಶ್ಮೀರ) ಕುಂತಳ, ಕಳಿಂಗ, ಗುರ್ಜರ ಹೀಗೆ ಅನೇಕ ಭಾಗಗಳಿಂದ ಅನೇಕ ಜನ ಕಲ್ಯಾಣಕ್ಕೆ ಬಂದಿದ್ದಾರೆ. ಹಾಗೆ ಬಂದವರಲ್ಲಿ ರಾಜ ಮಹಾರಾಜರು, ಮಂತ್ರಿಗಳು, ಅಧಿಕಾರಿಗಳು, ಶ್ರೀಮಂತರು, ಬಡವರು, ಪಂಡಿತರು ಹೀಗೆ ನಾನಾ ವೃತ್ತಿಯವರು, ನಾನಾ ಕಲಾವಿದರು ಸೇರಿದ್ದಾರೆ. ಕಾಶ್ಮೀರದಿಂದ ಮಹಾದೇವ ಭೂಪಾಲ ಆತನ ಹೆಂಡತಿ ಗಂಗಾದೇವಿ, ಸೌರಾಷ್ಟ್ರದಿಂದ ಆದಯ್ಯ, ಸೊಡ್ಡಳ ಬಾಚರಸ, ಬರ್ಬರದಿಂದ ಮರುಳ ಶಂಕರದೇವ, ಮಾಳವದಿಂದ ಡೋಹರಕಕ್ಕಯ್ಯ, ಕುಂತಳದಿಂದ ಏಕಾಂತ ರಾಮಯ್ಯ, ಆಂಧ್ರದಿಂದ ಮೈದುನ ರಾಮಯ್ಯ. ಹೀಗೆ ದೇಶದ ವಿವಿಧ ದಿಕ್ಕಿನಿಂದ, ವಿವಿಧ ಮನೋಧರ್ಮದ, ವಿವಿಧ ಬದುಕಿನ, ವಿವಿಧ ವೃತ್ತಿಯ ಜನ ಒಂದೆಡೆ ಸ್ಥೆರಿದರು. ಇದನ್ನೆ ನಾವು 'ವೈವಿಧ್ಯತೆಯಲ್ಲಿ ಐಕ್ಯತೆ' ಎನ್ನುತ್ತೇವೆ. ಇದು ವಚನ ಚಳುವಳಿಯ ಸಾಧ್ಯತೆ.

ಕಾಶ್ಮೀರದ ಅರಸನಾದ ಮಹಾದೇವ ಭೂಪಾಲ ಕಲ್ಯಾಣದ ಸಾಮಾಜಿಕ ಅಂದೋಲನದ ವಿಷಯ ಕೇಳಿ ಐಹಿಕ ಭೋಗ–ಭಾಗ್ಯಗಳನ್ನು ತೊರೆದು ಹೆಂಡತಿ ಗಂಗಾದೇವಿ ಸಮೇತ ಕಲ್ಯಾಣಕ್ಕೆ ಬಂದು ಶಾಶ್ವತ ಸುಖದ ಮಾರ್ಗ ಹಿಡಿದಿದ್ದಾನೆ. ಆ ಮಾರ್ಗ ಮೋಳಿಗೆಯ ಮಾರ್ಗ. ಮೋಳಿಗೆ ಎಂದರೆ ಕಟ್ಟಿಗೆ ಮಾರುವ ಕಾಯಕ. ಶಿವಶರಣರ ಮನೆಗಳಿಗೆ ಕಟ್ಟಿಗೆ ವ್ಯಾಪಾರ ಮಾಡಿ ಬಂದ ಹಣದಿಂದ ನಿತ್ಯ ದಾಸೋಹ ನಡೆಸುತ್ತಿರುತ್ತಾನೆ. ಇದಕ್ಕೆ ಸತಿ ಜೊತೆಗೂಡಿದ್ದಾಳೆ. ಮಹದೇವ ಭೂಪಾಲ ಮಾರಯ್ಯನಾದರೆ, ಸತಿ ಗಂಗಾದೇವಿ ಮಹಾದೇವಮ್ಮಳಾಗಿ, ಮೋಳಿಗೆ ಕಾಯಕದಿಂದ ಮೋಳಿಗೆ ಮಾರಯ್ಯ ಮೋಳಿಗೆ ಮಹಾದೇವಮ್ಮ ಎಂದೇ ಹೆಸರಾದವರು. ನಿಃಕಳಂಕ ಮಲ್ಲಿಕಾರ್ಜುನ ಎಂಬ ಅಂಕಿತದಿಂದ ಸುಮಾರು 819 ವಚನಗಳನ್ನು ಮೋಳಿಗೆ ಮಾರಯ್ಯ ರಚಿಸಿದ್ದಾನೆ. ಹಾಗೆಯೇ ಆತನ ಹೆಂಡತಿ ಮಹಾದೇವಿಯ ವಚನಗಳೂ ಲಭ್ಯವಾಗಿದ್ದು ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಎಂಬ ಅಂಕಿತದಿಂದ ಸುಮಾರು 69 ವಚನಗಳಿವೆ.

### ಕಾಯಕ ಮತ್ತು ದಾಸೋಹ

ಅರಮನೆ, ರಾಜಧಾನಿ, ರಾಜ್ಯ, ರಾಜಯೋಗ, ಎಲ್ಲವನ್ನು ತ್ಯಜಿಸಿ, ಗಂಗಾದೇವಿಯೊಡನೆ ಕಲ್ಯಾಣಕ್ಕೆ ಬಂದು ಕಟ್ಟಿಗೆ ಕಾಯಕವನ್ನು ಸ್ವೀಕರಿಸಿದ ಗಂಡನಿಗೆ ಅನುಕೂಲ ಸತಿಯಾಗಿ ನಿತ್ಯ ದಾಸೋಹವನ್ನು ಮಹಾದೇವಿ ಮಾಡುತ್ತಿರುತ್ತಾಳೆ. ಇಂದಿನದು ನಾಳೆಗೆ ತಂಗಳು ಎನ್ನುವಂತೆ ದಿನದ ದುಡಿಮೆಯಿಂದ ಬಂದ ಹಣ ಅಂದಿನ ದಾಸೋಹಕ್ಕೆ ಮೀಸಲು. ನಿತ್ಯದ ದುಡಿಮೆ ನಿತ್ಯದ ದಾಸೋಹ ಇದು ದಂಪತಿಗಳ ನಿತ್ಯತತ್ವ. ಕೂಡಿಡುವ ಬುದ್ಧಿ ಈ ದಂಪತಿಗಳದ್ದಲ್ಲ. ಇವರಿಗೆ ಕಾಯಕವೆಂದರೆ ಸತ್ಯ, ಅಹಿಂಸೆ, ನೀತಿ ನಂಬಿಕೆ ಪ್ರಾಮಾಣಿಕತೆ. ಇವರ ಕಾಯಕ ಭಕ್ತಿ ಮತ್ತು ದಾಸೋಹದ ವಿಷಯ ಕಲ್ಯಾಣದ ತುಂಬೆಲ್ಲಾ ವ್ಯಾಪಿಸಲು ಬಸವಣ್ಣ, ಸಿದ್ಧರಾಮ, ಚನ್ನಬಸವಣ್ಣ, ಮೊದಲಾದವರು ಈತನನ್ನು ನೋಡಲು ಬಂದು ಮಾರಯ್ಯನ ನಿಜಭಕ್ತಿ ಮತ್ತು ದಾಸೋಹ ಸೇವೆಯನ್ನ ಕಣ್ಣಾರೆ ಕಂಡು ಮನಸಾರೆ ಸ್ಮರಿಸಿದ್ದಾರೆ.

### ಮನೆಯ ನೋಡಾ ಬಡವರು, ಮನವ ನೋಡಾಧೀರರು

ಸೋಂಕಿನಲ್ಲಿ ಶುಚಿಗಳು, ಸರ್ವಾಂಗ ಧೀರರು
ಪರಸವ ನೋಡಿದೊಡೇನೂ ಇಲ್ಲ
ಸಮಯೋಚಿತಕ್ಕೆ ಸಕಲ ಪದಾರ್ಥ ಬಂದಿಹುದು
ಕೂಡಲ ಸಂಗಮದೇವ
ನಿಮ್ಮ ಶರಣರ ಸರ್ವಾಂಗ ಧೀರ
ಮೋಳಿಗೆಯ ಮಾರಿ ತಂದೆ.

ಎಂದು ಬಸವಣ್ಣನಿಂದಲೇ ಮಾರಿತಂದೆ ಎಂದು ಕರೆಸಿಕೊಂಡಿದ್ದಾನೆ. ಆ ಮಟ್ಟಕ್ಕೆ ತನ್ನ ಕಾಯಕ ಮತ್ತು ದಾಸೋಹದಲ್ಲಿ ತನ್ನನ್ನು ತಾನು ಸಮರ್ಪಿಸಿಕೊಂಡಿದ್ದಾನೆ. 'ಮೋಳಿಗೆ ಮಾರಿ ತಂದೆಗಳ ಶ್ರೀಪಾದಕ್ಕೆ ನಮೋ ನಮೋ ನಮೋ ಎಂದು ಚನ್ನಬಸವಣ್ಣನಿಂದ ಸ್ತುತಿಸಿಕೊಂಡಿದ್ದಾನೆ. ಹಾಗೆಯೇ ಭೀಮಕವಿ, ಪಾಲ್ಕುರಿಕೆ ಸೋಮನಾಥ, ಲಕ್ಕಣ್ಣದಂಡೇಶ ಮೊದಲಾದವರು ಈತನನ್ನು ತಮ್ಮ ತಮ್ಮ ರಚನೆಗಳಲ್ಲಿ ದಾಖಲಿಸಿದ್ದಾರೆ.

### ವಚನಗಳ ವಸ್ತು ವಿನ್ಯಾಸ

ಮೋಳಿಗೆ ಮಾರಯ್ಯನ ವಚನಗಳಲ್ಲಿ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಇಷ್ಟಲಿಂಗ, ಗುರುಲಿಂಗ ಜಂಗಮ, ಪ್ರಸಾದ, ಪಾದೋದಕ, ಬಯಲು, ಶರಣ, ಕಾಯಕ, ದಾಸೋಹ, ಇವೆಲ್ಲಾ ವಿಶೇಷ ಅರ್ಥವಂತಿಕೆ ಪಡೆದಕೊಂಡವು.

### ಭಕ್ತನ ಸ್ವರೂಪ : ಷಟ್‌ಸ್ಥಲ ಸ್ವರೂಪ

ಭಕ್ತನಾದಲ್ಲಿ ಧರಿತ್ರಿಯಂತಿರಬೇಕು
ಮಹೇಶ್ವರನಾದಲ್ಲಿ ಅಪ್ಪುನಿನಂತಿರಬೇಕು
ಪ್ರಸಾದಿಯಾದಲ್ಲಿ ವಹ್ನಿಯಂತಿರಬೇಕು
ಪ್ರಾಣಲಿಂಗಿಯಾದಲ್ಲಿ ಶುಕ್ರಿಕೊಂಡ ವಿಷದಂತಿರಬೇಕು
ಶರಣನಾದಲ್ಲಿ ಉರಿಯುಂಡ ಕರ್ಪೂರದಂತಿರಬೇಕು
ಐಕ್ಯನಾದಲ್ಲಿ ಹಸುಳೆ ಕಂಡ ಕನಸಿನಂತಿರಬೇಕು
ಹೀಂಗರಿದಡೆ ಆರರಲ್ಲಿ ಲೇಪ, ಮೂರರಲ್ಲಿ ಮುಕ್ತಿ
ಇವ ಮೀರಲಿಲ್ಲ ನಿಃಕಳಂಕ ಮಲ್ಲಿಕಾರ್ಜುನಾ.

ಶರಣನ ಸಾಧನೆಯ ಮಾರ್ಗದ ವಿಕಾಸ ಹಂತದಲ್ಲಿ ಭಕ್ತಿ, ಧರಿತ್ರಿ, ಮಹೇಶ, ಅಪ್ಪು, ಪ್ರಸಾದಿ, ವಹ್ನಿ, ಪ್ರಾಣಲಿಂಗಿ, ಶುಕ್ರಿಕೊಂಡ ವಿಷ, ಶರಣ ಕರ್ಪೂರ ಎನ್ನುವ ನಿರ್ದೇಶನಗಳು ಷಟ್‌ಸ್ಥಲದ ತಾತ್ವಿಕ ವಿವೇಚನೆಯಿಂದ ಕೂಡಿದವುಗಳು. ' ಐಕ್ಯನಾದಲ್ಲಿ ಹಸುಳೆ ಕಂಡ ಕನಸಿನಂತಿರಬೇಕು' ಎನ್ನುವ ಮಾತು ಅನುಭಾವದ ಸ್ಥಿತಿ, ಅವ್ಯಕ್ತ ಭಾವ. ಭಕ್ತ ತಾನೇ ಶಿವನಾಗುವ ಸ್ಥಿತಿ.

ಆನಂದಿಸಿ ಕಣ್ಣು ಮುಚ್ಚಿ ಆಹಾ ಎಂಬುದು ಆವೇಶ ಭಕ್ತಿ
ತಲೆದೂಗಿ ಝುಂಪಿಸಿ ಅಂತ:ಕರಣ ಕದಡಿ ಆನಂದಿಸುವುದು
ಭಾವಭಕ್ತಿ
ಬಿಂಬಿಸುವುದಕ್ಕೆ ಪ್ರತಿರೂಪಿಲ್ಲದೆ ಆನಂದಆಶ್ರುಗಳು ನಿಂದು
ಮುತ್ತಿನೊಳಗಣ ಅಪ್ಪುವಿನಂತೆ ಹೆಪ್ಪುಗಳಿಯದೆ ನಿಂದುದು
ಜ್ಞಾನಭಕ್ತಿ
ಇಂತೀ ಆತುರಿಯ ತುರೀಯ ಏಕಚಿತ್ತವೆಂಬುದು ನಿಹಿತವಾದಲ್ಲಿ
ಸ್ಥಲಲೇಪ, ನಿಃಕಳಂಕ ಮಲ್ಲಿಕಾರ್ಜುನ.

ಹೀಗೆ ಮಾರಯ್ಯ ಭಕ್ತಿಯ ವಿವಿಧ ಸ್ವರೂಪಗಳು ಮತ್ತು ಅವುಗಳ ಸ್ವಭಾವಗಳನ್ನು ನಿರೂಪಿಸಿದ್ದಾನೆ. ಭಕ್ತನಾದವನಿಗೆ ಆವೇಶವಾಗಲಿ, ಅತಿ ಭಾವುಕತೆಯಾಗಲಿ ಇರಬಾರದು ಎನ್ನುವುದು ಮಾರಯ್ಯನ ನಿಲುವು. ಇದ್ದೂ ಇಲ್ಲದಂತೆ ಶ್ರದ್ದೆಯಿಂದ ದೇವೋಪಾಸನೆ ಮಾಡುವುದೇ ನಿಜವಾದ ಭಕ್ತಿ. ಹರಿವ ಮನಸ್ಸನ್ನು ನಿಯಂತ್ರಿಸುವುದೇ ಭಕ್ತಿ. ಅದಕ್ಕೆ ನಿಷ್ಕಲ್ಮಶ ಮನಸ್ಸು ಬೇಕು.
ಮೋಳಿಗೆ ಮಾರಯ್ಯನ ವಚನಗಲಲ್ಲಿ ಷಟ್‌ಸ್ಥಲ ಮತ್ತು ಅಷ್ಟಾವರಣಗಳಿಗೆ ಆದ್ಯತೆ ಇದ್ದರೂ ಕೆಲವು ರಚನೆಗಳಲ್ಲಿ ಸಾಮಾಜಿಕ ಚಿಂತನೆಯಿದೆ. ಮನುಷ್ಯ, ಸಮಾಜ, ಧರ್ಮ, ದೇವರು, ಭಕ್ತಿ ಆಚಾರ, ವಿಚಾರ, ನಂಬಿಕೆಗೆ ಸಂಬಂಧಪಟ್ಟ ಅನೇಕ ವಿಚಾರಗಳು ಇವೆ.

ಕಲ್ಲು ದೇವರೆಂದು ನಂಬಿ ಪೂಜಿಸಿದವರೆಲ್ಲರೂ
ಕಲಿಯುಗದ ಕತ್ತೆಗಳಾಗಿ ಸಿಲ್ಕಿ ಕೆಟ್ಟಳಿದು ಹೋದರು
ಮಣ್ಣು ದೇವರೆಂದು ನಂಬಿ ಪೂಜೆಯ
ಮಾಡಿದವರೆಲ್ಲಾ ಮುಕ್ತಿ ಪಥ ಕಾಣದೆ ಕೆಟ್ಟು
ಶನಿ ಸೂಕರಾದಿಗಳಾಗಿ ಕೆಟ್ಟು ಹೋದರು
ಎಲ್ಲ ದೇವರಿಗೆ ಮಸ್ತಕ ಪೂಜೆ
ನಮ್ಮ ಶಿವ ಭಕ್ತರ ಕರಮನಭಾವದೊಳು
ಪೂಜೆಗೊಂಬುವ ಶ್ರೀ ಗುರುಲಿಂಗ ಜಂಗಮಕ್ಕೆ ಉಂಗುಷ್ಟ ಪ್ರಜೆ

ಎಂದೇಳುತ್ತಾ ನಿಜವಾದ ದೇವರ ಅಸ್ತಿತ್ವವನ್ನು ನಿರೂಪಿಸುತ್ತಾನೆ. ಗುರುಲಿಂಗ ಜಂಗಮರು ನಿಜವಾದ ದೇವರು. ಕಾರಣ ಅವರು ಮಾತನಾಡುತ್ತಾರೆ, ಓಡಾಡುತ್ತಾರೆ ಕೊಟ್ಟಿದ್ದನ್ನು ತಿನ್ನುತ್ತಾರೆ. ದೇವರು ಜಂಗಮ ಸ್ವರೂಪಿ, ಉಣ್ಣದ ಮಾತನಾಡದ ದೇವರು ದೇವರಲ್ಲ. ಮೂಢನಂಬಿಕೆಯನ್ನು ನಂಬಿಕೆಯೆಂದು ನಂಬಬಾರದು. ದೇವರು ಕಲ್ಲಲಿಲ್ಲ ಮಣ್ಣಲಿಲ್ಲ, ಮರದಲ್ಲಿ ಇಲ್ಲ. ಅವನಿರುವುದು ನಿಜ ಶರಣನ ಕರಮನಭಾವದೊಳು ಎಂದು ದೇವರ ಅಸ್ತಿತ್ವವನ್ನು ನಿರೂಪಿಸುತ್ತಾನೆ. ದೇವರು, ಧರ್ಮ, ಭಕ್ತಿಯ ಬಗೆಗೆ ಅರಿವು ಮೂಡಿಸುತ್ತಾನೆ. ಸ್ಥಾವರ ಸಂಸ್ಕೃತಿಯನ್ನು ಖಂಡಿಸುತ್ತಾನೆ.

ತಾನೇ ಬಲ್ಲನೆಂದು ಇಲ್ಲದ ಹುಸಿಯ ಹುಸಿವ
ಗೆಲ್ಲಗೂಳಿತನಕ್ಕೆ ವಲಭನೆಂದು ಇವರೆಲ್ಲರೂ ಅರಿಯರೆಂದು
ಬಲ್ಲಹ ನಾನೆಂದು ನಿಲ್ಲದ ಹೋರುವ ಖುಲ್ಲರ ನೋಡಾ
ಕಳ್ಳರ ಹಾದಿಯೊಳಗಿಪ್ಪ ಅನುವಿನ ನೆರೆಮೊಂಡನಂತೆ
ಕೊಳ್ಳುವ ಬೆಲೆಯ ಬೇಡಿ ಕಾಡುವ ಖುಲ್ಲನ ಬಲ್ಲತನದಂತೆ
ಇವರೆಲ್ಲರ ಹಿರಿಯರೆಂದಡೆ ಕಲ್ಲಿಯೊಳಗಾದ ಮೃಗದಂತೆ
ಇವರೆಲ್ಲಕ್ಕು ಬಲ್ಲತನವೇಕೆ ನಿಃಕಳಂಕ ಮಲ್ಲಕಾರ್ಜುನಾ.

ಅದ್ವೈತವ ಹೇಳುವ ಹಿರಿಯರೆಲ್ಲರೂ ದ್ವೈತಕ್ಕೊಳಗಾದರು, ನಿಸ್ಸಂಸಾರವ ಹೇಳುವ ಹಿರಿಯರೆಲ್ಲರೂ ಸಂಸಾರದ ಸಾರವ ಚಪ್ಪರಿಸಿ ಕೆಟ್ಟರು, ಭಕ್ತರಿಗೆ ನಿತ್ಯವ ಹೇಳಿ, ತಾವು ಅನಿತ್ಯದ ಹಾದಿಹಿಡಿದರು, ನಾವು ಮುಕ್ತರಾದವೆಂಬ ಭ್ರಷ್ಟರ ನೋಡಾ, ಎಚಿದು ಸಮಾಜದ ಢಾಂಬಿಕ ಸ್ವಭಾವಗಳನ್ನು ನೇರವಾಗಿ ವಿಡಂಬಿಸುತ್ತಾನೆ. ಮನುಷ್ಯನ ವರ್ತನೆಯಲ್ಲಿನ ದ್ವಂದ್ವಗಳನ್ನು ಟೀಕಿಸುತ್ತಾನೆ. ನಡೆಗೂ ನುಡಿಗೂ ಸಾಮ್ಯತೆ ಇಲ್ಲದಿದ್ದರೆ ಸಾಧಿಸುವುದೇನೂ ಇಲ್ಲ. ಹೇಳುವುದಕ್ಕೂ ಮಾಡುವುದಕ್ಕೂ ಅಂತರವಿರಬಾರದೆಂಬುದು ಮಾರಯ್ಯನ ನಿಲುವು.
ಕಾಶ್ಮೀರದ ಅರಸನಾಗಿ ಸಮಾಜದ ಉನ್ನತ ಸ್ಥಾನದಲ್ಲಿದ್ದರೂ ಸಖಭೋಗಕ್ಕೆ ಮಾರು ಹೋಗದೆ ಅದೆಲ್ಲವನ್ನು ತ್ಯಜಿಸಿ ಒಬ್ಬ ಶರಣನಾಗಿ ಅನುಭಾವಿಯಾಗಿ, ಸಾಮಾನ್ಯ ವ್ಯಕ್ತಿಯಂತೆ ಕಟ್ಟಿಗೆಯ ಹೊರೆ ಮಾರಿ ಬದುಕಲು ಇಚ್ಚಿಸುವುದು ಅಪರೂಪದ ಮತ್ತು ಮಹತ್ವದ ಸಂಗತಿಯಾಗಿದೆ. ಕಲ್ಯಾಣದಲ್ಲಿ ಅಭಿಮಾನದ ವ್ಯಕ್ತಿಯಾಗಿ, ಕಾಯಕದ ಮೂರ್ತರೂಪವಾಗಿ, ವಚನಕಾರರು ಬಯಸಿದ ಆದರ್ಶ ಸಂಸಾರದ ಪ್ರತೀಕವಾಗಿ ಬಾಳಿ ಬದುಕಿದ ಮೋಳಿಗೆ ಮಾರಯ್ಯ ಎಲ್ಲ ಸಂದರ್ಭಕ್ಕೂ ಪ್ರಸ್ತುತವಾಗುತ್ತಾನೆ. ಸಮಾಜದ ಒಳಿತು ಮತ್ತು ವ್ಯಕ್ತಿಯ ಒಳಿತನ್ನು ಗುರಿಯಾಗಿಟ್ಟುಕೊಂಡ ಮಾರಯ್ಯನ ಬದುಕು, ಸಾಧನೆ ಸಿದ್ದಿ ಮತ್ತು ರಚನೆಗಳು ಎಂದೆಂದಿಗೂ ಮಾರ್ಗದರ್ಶಕವಾಗಿರಬೇಕಾದ ಚಿರಂತನ ಸತ್ಯವನ್ನು ಒಳಗೊಂಡಿದೆ. ಒಟ್ಟಾರೆ ಸಮಕಾಲೀನ ಹತ್ತಾರು ಸಮಸ್ಯೆಗಳಿಗೆ ಇಕ್ಕಟ್ಟು ಬಿಕ್ಕಟ್ಟುಗಳಿಗೆ ಶರಣರು ಸರ್ವವ್ಯಾಪಕವಾದ ಮತ್ತು ಸಾರ್ವಕಾಲಿಕವಾದ ಉತ್ತರವನ್ನು ತಮ್ಮ ನಡೆ ನುಡಿಯಿಂದಲೇ ಕೊಟ್ಟಿದ್ದಾರೆ. ಅವರಲ್ಲಿ ಮೋಳಿಗೆಯ ಮಾರಯ್ಯನೂ ಆದರ್ಶ.

**ಪರಾಮರ್ಶನ ಕೃತಿಗಳು**


1. ಸಮಗ್ರ ವಚನ ಸಂಪುಟ ಮಾಲೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
2. ವಚನ ಸಾಹಿತ್ಯ–ಡಾ.ಎಂ.ಚಿದಾನಂದ ಮೂರ್ತಿ.
3. ಶರಣರ ಅನುಭಾವ ಸಾಹಿತ್ಯ. ಡಾ.ಎಚ್.ತಿಪ್ಪೇರುದ್ರಸ್ವಾಮಿ
4. ಮೋಳಿಗೆ ಮಾರಯ್ಯನ ವಚನಗಳು.ಮೂರು ಸಾವಿರ ಮಠ. ಹುಬ್ಬಳ್ಳಿ
5. ಮೋಳಿಗೆ ಮಾರಯ್ಯ–ಡಾ.ವಿಜಯಶ್ರೀ ಸಬರದ.
6. ಕರ್ನಾಟಕ ಶರಣ ಕಥಾಮೃತ. ಡಾ.ಎಚ್.ತಿಪ್ಪೇರುದ್ರ ಸ್ವಾಮಿ.
7. ಬಸವತತ್ವ ಸಾಮಾಜಿಕ ಬದಲಾವಣೆ.ಸಂ.ಮಹೇಶ್ ತಿಪ್ಪಶೆಟ್ಟಿ. ಕನ್ನಡ ವಿಶ್ವ ವಿದ್ಯಾನಿಲಯ.